ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/10/2016-17.. ದಿನಾಂಕ:13-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಸದ್ದಾಮ್ ಹುಸೇನ್ ತಂದೆ ದಿವಾನ್‌ಸಾಬ್<br>2)ಡಿ.ಯೂಸುಫ್ ಅಲಿ ತಂದೆ ದಿವಾನ್‌ಸಾಭ್<br>3)ದಿವಾನ್‌ಸಾಬ್ ತಂದೆ ಲೇಟ್ ಜಿಂದುಸಾಬ್<br>ಉಜ್ಜನಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ನಾಗೇನಹಳ್ಳಿ ಗ್ರಾಮದ ಸನಂ 58. ವಿಸ್ತೀರ್ಣ 4-86. ಎಕ್ರೆ ಜಮೀನನ್ನು ದಾನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ನಾಗೇನಹಳ್ಳಿ ಗ್ರಾಮದ ಸನಂ 58. ವಿಸ್ತೀರ್ಣ 4-86. ಎಕ್ರೆ ಜಮೀನನ್ನು ಸದರಿ ತಾಲೂಕು ಉಜ್ಜನಿ ಗ್ರಾಮದ ದಿವಾನ್‌ಸಾಬ್ ತಂದೆ ಜಿಂದುಸಾಬ್ ಇವರು ಸದರಿ ತಾಲೂಕು ಉಜ್ಜನಿ ಗ್ರಾಮದ ಸದ್ದಾಮ್ ಹುಸೇನ್ ತಂದೆ ದಿವಾನ್ ಸಾಬ್. ಡಿ. ಯೂಸುಫ್ ಅಲಿ ತಂದೆ ದಿವಾನ್ ಸಾಬ್ ಇವರಿಗೆ ದಿನಾಂಕ 03-02-2016 ರಂದು ಡಾಕ್ಯುಮೆಂಟ್ ನಂಬರ್: 3617/2015-16. ರ ಪ್ರಕಾರ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ನಾಗೇನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 06-02-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಮೂಲ ಪಟ್ಟದಾರರು ನಮೂನೆ-21 ಕ್ಕೆ ಸಹಿ ಮಾಡಿಲ್ಲದ ಕಾರಣ ಹಾಗೂ ಕಾರ್ಪೊರೇಷನ್ ಬ್ಯಾಂಕ್ ಕೊಟ್ಟೂರು ಇವರಲ್ಲಿ ಸಾಲ ಎಂದು ನಮೂದಾಗಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 12/2015-16. ದಿನಾಂಕ 07-03-2016 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 13-06-2016 ರಂದು ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ನಾಗೇನಹಳ್ಳಿ ಗ್ರಾಮದ ಸನಂ 58. ವಿಸ್ತೀರ್ಣ 4-86. ಎಕ್ರೆ ಜಮೀನನ್ನು ನನ್ನ ಖಾಸಾ ಮಕ್ಕಳಾದ ಸದ್ದಾಮ್ ಹುಸೇನ್ ಮತ್ತು ಡಿ.ಯೂಸುಫ್ ಅಲಿ ಇವರ ಹೆಸರಲ್ಲಿ ನನ್ನ ಸ್ವ ಇಚ್ಚೇಯಿಂದ ಹಾಗೂ ಉಭಯರ ಮೇಲಿನ ಪ್ರೀತಿ ವಿಶ್ವಾಸದಿಂದ ದಿನಾಂಕ 03-02-2016 ರಂದು ಡಾಕ್ಯುಮೆಂಟ್ ನಂಬರ್: 3617/2015-16.ಪ್ರಕಾರ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತೇನೆ. ಸದರಿ ದಾನ ಪತ್ರ ಪ್ರಕಾರ ಸದ್ದಾಮ್ ಹುಸೇನ್ ತಂದೆ ದಿವಾನ್ ಸಾಬ್. ಡಿ.ಯುಸೂಫ್ ಅಲಿ ತಂದೆ ದಿವಾನ್ ಸಾಬ್. ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಋಣಗಳನ್ನು ಅವರ ಇಬ್ಬರ ಮಕ್ಕಳಿಗೂ ಜಂಟಿಯಾಗಿ ವರ್ಗಾಯಿಸಲು ತಿಳಿಸಿ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ನಾಗೇನಹಳ್ಳಿ ಗ್ರಾಮದ ಸನಂ 58. ವಿಸ್ತೀರ್ಣ 4–86. ಎಕ್ರೆ ಜಮೀನನ್ನು ದಿನಾಂಕ 03–02–2016 ರ ಡಾಕ್ಯುಮೆಂಟ್ ನಂಬರ್: 3617/2015–16 ರ ದಾನ ಪತ್ರ ಪ್ರಕಾರ ಅರ್ಜಿದಾರರಾದ ಸದ್ದಾಮ್ ಹುಸೇನ್ ತಂದೆ ದಿವಾನ್ ಸಾಬ್. ಡಿ.ಯೂಸುಫ್ ಅಲಿ ತಂದೆ ದಿವಾನ್ ಸಾಬ್. ಉಜ್ಜನಿ ಗ್ರಾಮ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 13–06–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸದ್ದಾಮ್ ಹುಸೇನ್ ತಂದೆ ಡಿ.ಯೂಸುಫ್ ಅಲಿ ತಂದೆ ದಿವಾನ್ ಸಾಬ್. ದಿವಾನ್ ಸಾಬ್ ತಂದೆ ಜಿಂದುಸಾಬ್ ಉಜ್ಜನಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.